ಖಂಡ 1 ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ಈ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಮೊದಲನೆಯ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು) : "2006ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ 4) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೊರುತ್ತೇನೆ."

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, "2006ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ 4) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು.

ಪ್ರಕಟಣೆ

ಉಪಾಧ್ಯಕ್ಷರು: ಈಗ ಮಾನ್ಯ ಗೌವರ್ನರ್‌ನಿಂದ ಒಂದು ಮೆಸೇಜ್ ಬಂದಿದೆ. ಅದನ್ನು ಓದುತ್ತೇನೆ.

8. ಪ್ರಕಟಣೆ

Message of Governor Dt. July 22, 2006

Under Article 200 of the Consitution if India regarding Karnataka Legislature (Prevention of Disqualification (Amendment) Bill, 2006 - I, T.N. Chaturvedi, Governor of Karnataka have considered the Karnataka Legislature (Prevention of Disqualification (Amendment) Bill, 2006 passed by both the Houses of Legislature in accordance with the provisions of Article 200 of the Constitution of India.

Article 191(1) (a)of the Constitution reads as follows :-

"A person shall be disqualified for being chosen as, and for being a Member of the Legislative Assembly or Legislative Council of a State -

(a) if he holds any office of profit under the Government of India or the Government of any State specified in the First Schedule, other than an office declared by the Legislature of the State by law not to disqulify its holder."

It may be appropriate to refer to the purpose and the spirit behind the disqulification clause of persons holding office of profit. The exceptions that may be provided by a Statute framed in accordance with this provision ought to be evidently in consonance with the spirit of the Constitution. It should in to way run counter to the very intention of the provisions so as to dilute or obliterate the same. The earlier provisions of the Karnataka Ligislature (Prevention of Disqualification) Act, 1956 providing exemption contemplated that only elelcted offices and persons holding such eletced offices were exempted from the disqualification clause, which is in line with the letter and spirit of the Constitution.

The Amendment seeks to exclude not only such elected offices but also posts, which need not be necessarily elected offices. The sub-clause 5 of Section 2 of the amended Act has a very sweeping and wide effect so as to encompass all offices under the purview of prevention of disqualification clause. Further, the issue arises whether the exemption of an office can be provided from a preceding date when it didi not even come into existence. This obviously is not in line with the purpose of disqualification as contemplated under Articel 191 of the Constitution of India. It may have the effect of diluting the entire provison and the purpose for which it was originally envisaged. It would be referable to specify or list the details or particulars sufficiently of offices, which are intended to be excluded.

2. The amendment to Section 3 of the Karnataka Legislature (Prevention of Disqualification) Act, 1956 is sought to be applicable with retrospective effect from the date the original enactment came into force. Any exclusion for the purpose of Article 191 would be with prospective effect only.

3. Section 3 of the amended Act contemplates special provisions as to the validation of certain previous actions, which may not be in

conformity with the Constitutional provisions and the law laid down by the Supreme Court in this regard. The amendment aims to nullify the judgment or order of any court or tribunal or order or opinion of any other quasi-judicial statutory authority.

While expressing my highest regards for the Hon'ble Members of the State Legislature, I,T.N. Chaturvedy, Governor of Karnataka, in exercise of the powers conferred under Article 200 of the Constitution of India, hereby return the Bill with the request for reconsideration, keeping in view the observations as above, by both the Houses of the Legislature.

ಉಪಾಧ್ಯಕ್ಷರು : ಬೇಕಾದರೆ ಇದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಆ ಬಿಲ್ ಅನ್ನು ಇಂಟ್ರಡ್ಯೂಸ್ ಮಾಡಿದಾಗ ಅದರ ಕ್ಲಾರಿಫಿಕೇಷನ್ ಅಥವಾ ಅದರ ಮೆಸೇಜ್ ಏನಾದರೂ ಇದ್ದರೆ ಆಗ ಓದಿ ಹೇಳಬೇಕು. ಆದರೆ ನೀವು ಮೊದಲೆ ಮೆಸೇಜ್ ಓದಿ ಹೇಳುತ್ತಿದ್ದೀರಿ, ನಂತರ ಬಿಲ್ ಇಂಟ್ರಡ್ಯೂಸ್ ಮಾಡುವಂತಾದ್ದು ಅದು ಸರಿಯಾಗುವುದಿಲ್ಲ.

ಉಪಾಧ್ಯಕ್ಷರು : ಇದು ನಿಮ್ಮ ಗಮನಕ್ಕೆ ಬಂದಿರತಕ್ಕಂಥ ಮೆಸೇಜ್ ಓದಿ, ಅದರ ಬಿಲ್ ಇಂಟ್ರೊಡಕ್ಷನ್ ನಾಳೆ ಇದೆ. ಇದು ಆಗಿ ಹೋಯಿತಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಫೀಸ್ ಆಫ್ ಪ್ರಾಫಿಟ್ ಬಿಲ್‌ಗೆ ಕೊಟ್ಟಂತಹ ಎಕ್ಸ್‌ಪ್ಲನೇಷನ್ ಅದಕ್ಕಾಗಿ ನೀವು ಬಿಲ್ ಹಾಗೂ ಇದನ್ನು, ಅಂದರೆ ಎರಡನ್ನೂ ತೆಗೆದುಕೊಳ್ಳುವುದು ಸರಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಉಭಯ ಸದನಗಳಲ್ಲಿ ಅನರ್ಹತೆಯ ಬಿಲ್‌ನ್ನು ಈಗಾಗಲೇ ಮಂಜೂರಾತಿ ಮಾಡಿದ್ದೇವೆ. ಅದನ್ನು ಮಂಜೂರಾತಿ ಮಾಡಿ ನಂತರ ಅದನ್ನು ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಟ್ಟಿರುವಂತಹ ಸಂದರ್ಭದಲ್ಲಿ ಅದಕ್ಕೆ ಅಂಕಿತವನ್ನು ಹಾಕದೆ, ಉಭಯ ಸದನಗಳಿಗೆ ಒಂದು ಸಂದೇಶವನ್ನು ಕಳುಹಿಸಿಕೊಟ್ಟಿದ್ದಾರೆ. ಆ ಸಂದೇಶದ ಉದ್ಧೃತ ಭಾಗವನ್ನು ಮಾನ್ಯ ಉಪಾಧ್ಯಕ್ಷರು ಓದಿದರು. ನಂತರ ಈ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ನಾನು ಕೇಳುತ್ತೇನೆ. ಅದರ ಪರ್ಯಾಲೋಚನೆಯನ್ನು ನಾಳೆ ತೆಗೆದುಕೊಳ್ಳುತ್ತೇವೆಂದರೆ ನಾಳೆ ತೆಗೆದುಕೊಳ್ಳಬಹುದು. ಅದರ ಬಗ್ಗೆ ಚರ್ಚೆಯ ಪ್ರಶ್ನೆ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಗೊತ್ತಿದ್ದು, ಗೊತ್ತಿದ್ದೂ ಏಕೆ ಇಂಟ್ರೊಡ್ಯೂಸ್ ಮಾಡುತ್ತಿರೆಂಬುದು ನನಗಂತೂ ಅರ್ಥವಾಗುತ್ತಿಲ್ಲ. ಈವನ್ ಪಾರ್ಲಿಮೆಂಟ್‌ನಲ್ಲೂ ಕೂಡ ಅದು ಜೆಪಿಸಿ ಗೆ ಹೋಗಿದೆ. ನೋಡೋಣ, ಜೆಪಿಸಿ ಮುಂದೆ ಯಾವ್ಯಾವ ಆಫೀಸ್‌ಗಳು, ಆಫೀಸ್ ಆಫ್ ಪ್ರಾಫಿಟ್‌ನಲ್ಲಿ ಬರುತ್ತವೆ. ಮತ್ತೆ ನಮಗೆ ಏನು ಬೇಕು ಅದನ್ನೂ ಯೋಚನೆ ಮಾಡೋಣ. ಆಮೇಲೆ ನಾವು ಅದರ ಬಗ್ಗೆ ಚಿಂತನೆ ಮಾಡೋಣ; ತರಾತುರಿಯಲ್ಲಿ ತರುವುದು ಅವಶ್ಯಕತೆ ಏನಿದೆ?

ಶ್ರೀ ಎಂ.ಪಿ. ಪ್ರಕಾಶ್ : ಈಗ ಪ್ರಶ್ನೆ ಇಷ್ಟೇ, ಕೇಂದ್ರ ಸರ್ಕಾರದಲ್ಲಿ ಇಂತಹ ವಿಚಾರ ಬಂದಾಗ ಜಂಟಿ ಸಮಿತಿಗೆ ಅದನ್ನು ಪರ್ಯಾಲೋಚನೆಗೆ ಕಳುಹಿಸಿಕೊಡುವುದಕ್ಕಿಂತ ಮುಂಚಿತವಾಗಿ ಮಾನ್ಯ ರಾಷ್ಟ್ರಪತಿಗಳು ಆ ಕಾನೂನಿಗೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಅಲ್ಲಿ ತಮ್ಮ ಸ್ಥಾನಗಳನ್ನು ಅಲ್ಲಿರತಕ್ಕಂಥ ಪಾರ್ಲಿಮೆಂಟರಿ ಸದಸ್ಯರು ಭದ್ರಪಡಿಸಿಕೊಂಡಿದ್ದಾರೆ. ಇದನ್ನು ಯಾವುದೋ ಒಂದು ಒಪ್ಪಂದದ ಕಾರಣಕ್ಕಾಗಿಯೋ, ಒಳ ಒಪ್ಪಂದದ ಕಾರಣಕ್ಕಾಗಿಯೋ ಜಂಟಿ ಸಮಿತಿಗೆ ಇದನ್ನು ಕಳಹಿಸಿಕೊಡುವುದರ ಮೂಲಕವಾಗಿ, ಎಲ್ಲಾ ರಾಜ್ಯಗಳ ಜೊತೆಗೆ ಮಾತನಾಡಿ, ಆ ನಿರ್ಣಯವನ್ನು ಮಾಡುವುದಕ್ಕೆ ಒಂದು ವರ್ಷವಾಗ ಬಹುದು ಅಥವಾ ಎರಡು ವರ್ಷವಾಗ ಬಹುದು. ಆದರೆ ಇಲ್ಲಿರತಕ್ಕಂಥ ಸಮಸ್ಯೆ ಬಗೆಹರಿಸಬೇಕಾಗಿದ್ದರೆ, ಮಾನ್ಯ ರಾಜ್ಯಪಾಲರು ಆ ಪ್ರಕಾರವೇ ಮಾಡಬಹುದು ಅಥವಾ ಮಾಡದೇ ಇರಬಹುದು. ಆದರೆ ಮಾನ್ಯ ರಾಷ್ಟ್ರಪತಿಗಳು ಮಾಡಿರುವಂತಹ ವಿಷಯವಿದೆ. ಆದ್ದರಿಂದ ಇದನ್ನು ಪರ್ಯಾಲೋಚಿಸಬೇಕು ಎನ್ನುವ ವಿಚಾರವನ್ನು ರಾತ್ರಿ 11 ಗಂಟೆ ಮೇಲೆ ಮಾಡುವುದು ಸರಿಯಾದುದಲ್ಲ ಎನ್ನುವುದಾದರೆ ನಾನು ಒಪ್ಪಿಕೊಳ್ಳುತ್ತೇನೆ. ನಾಳೆಯಾದರೂ ಅದನ್ನು ಚರ್ಚೆ ಮಾಡಬೇಕಾಗುತ್ತದೆ. ಆದ್ದರಿಂದ ಅದನ್ನು ಮಂಡಿಸುತ್ತೇನೆ.

ಉಪಾಧ್ಯಕ್ಷರು: ನಾಳೆ ನೋಡೋಣ. ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ರಾತ್ರಿ 11 ಗಂಟೆ 11 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ: ದಿನಾಂಕ: 27ನೇ ಸೆಪ್ಟೆಂಬರ್ 2006ರ ಬುಧವಾರದಂದು ಬೆಳಿಗ್ಗೆ 11. ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ-I

ಕರ್ನಾಟಕ ವಿಧಾನಸಭೆ

ಹನ್ನೆರಡನೇ ವಿಧಾನಸಭೆ

(ನಾಲ್ಕನೆಯ ಅಧಿವೇಶನ)

2006-07 ನೇಯ ಸಾಲಿನ ಒಂದನೇ ಕಂತಿನ ಪೂರಕ ಅಂದಾಜುಗಳ ಬಗ್ಗೆ ಬೇಡಿಕೆಗಳ ಪ್ರಸ್ತಾವಗಳು.

ಉಪ ಮುಖ್ಯಮಂತ್ರಿ ಮತ್ತು ಹಣಕಾಸು ಸಚಿವರು

ಮಾನ್ಯರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ಈ ಕೆಳಗಿನ ಪ್ರಸ್ತಾವನೆಗಳನ್ನು ಮಂಡಿಸುತ್ತಿದ್ದೇನೆ.

1. 2007ನೇ ಮಾರ್ಚ್ 31 ರ ಅಂತ್ಯದೊಳಗಾಗಿ 'ಕೃಷಿ ತೋಟಗಾರಿಕೆ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 9661.41 ಲಕ್ಷ ರೂಗಳಿಗೆ ಮೀರಿದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

2. 2007ನೇ ಮಾರ್ಚ್ 31 ರ ಅಂತ್ಯದೊಳಗಾಗಿ 'ಪಶುಸಂಗೋಪನೆ ಮತ್ತು ಮೀನುಗಾರಿಕೆ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ